ESTD : 1994

# ರಾಮಕೃಷ್ಣ ಸುದ್ದಿ ಸಂಚಯ

'ಸಹಕಾರ ಮಾಣಿಕ್ಯ'

ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ.
ಮಂಗಳೂರು

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ವಿಳಾಸ: 2 ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್‌ಹಾಸ್ಟೆಲ್ ಸರ್ಕಲ್, ಮಂಗಳೂರು – 575 003

Web Site: www.ramakrishnacredit.com Email: ho@ramakrishnacredit.com

ಸಂಪುಟ : x ಸಂಚಿಕೆ : 4 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಜನವರಿ–ಮಾರ್ಚ್ 2026

## ಅಧ್ಯಕ್ಷರ ಮಾತು

### 2025–26ನೇ ಸಾಲಿನಲ್ಲಿ ಒಟ್ಟು ವ್ಯವಹಾರದಲ್ಲಿ ರೂ. 212 ಕೋಟಿ ಹೆಚ್ಚಳ. ಸಾರ್ವಕಾಲಿಕ ವೃದ್ಧಿ. ರೂ. 1306 ಕೋಟಿ ವ್ಯವಹಾರ (ಠೇವಣಿ+ಸಾಲ). ರೂ. 6002 ಕೋಟಿ ಒಟ್ಟು ವಹಿವಾಟು (Turn over). ಎಲ್ಲಾ ಕಾರ್ಯವಿಭಾಗ ಗುರಿ ಮೀರಿದ ಪ್ರಗತಿ. ಅತ್ಯುಜ್ವಲ ಸಾಧನೆ



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

2025–26ನೇ ಸಾಲಿನಲ್ಲಿ, ಒಟ್ಟು ವ್ಯವಹಾರದಲ್ಲಿ ಸಾರ್ವಕಾಲಿಕ ದಾಖಲೆಯ ವೃದ್ಧಿಯನ್ನು ಹೊಂದಿ 31.03.2026ಕ್ಕೆ ಠೇವಣಾತಿ ರೂ.695 ಕೋಟಿ ಹಾಗೂ ಸಾಲ ರೂ.611 ಕೋಟಿಯೊಂದಿಗೆ ಒಟ್ಟು ವ್ಯವಹಾರ ರೂ.1306 ಕೋಟಿಯನ್ನು ತಲುಪಿ, ರೂ.6002 ಕೋಟಿ ಒಟ್ಟು ವಹಿವಾಟು (Turn over) ದಾಖಲಿಸಿ ತನ್ನ ಎಲ್ಲಾ ಕಾರ್ಯವಿಭಾಗಗಳಲ್ಲಿ ನಿಗದಿತ ಗುರಿಯನ್ನು ಮೀರಿ ಅಮೋಘ ಸಾಧನೆಯನ್ನು ಮಾಡಿದೆ.

31.03.2026ಕ್ಕೆ ಸಂಘವು ರೂ.19.47 ಕೋಟಿಯನ್ನು ಮೀರಿದ ನಿವ್ವಳ ಲಾಭವನ್ನು ಗಳಿಸಿದೆ. ಸಂಘದಲ್ಲಿ 31.03.2026ಕ್ಕೆ ರೂ.22 ಲಕ್ಷದಷ್ಟು ಮಾತ್ರ ಅನುತ್ಪಾದಕ ಆಸ್ತಿ ಇದ್ದು, ಇದು ಹೊರಬಾಕಿ ಸಾಲದ ಶೇ.0.04ಕ್ಕೆ ಸೀಮಿತವಾಗಿರುವುದಲ್ಲದೆ, **Net NPA 0%** ದಲ್ಲಿದೆ.

**31.03.2026ಕ್ಕೆ ಸಂಘದ ಸಾಧನೆಯ ಪಕ್ಷಿನೋಟ (ಅಂಕಿ–ಅಂಶಗಳು ಲೆಕ್ಕಪರಿಶೋಧನೆಗೆ ಒಳಪಟ್ಟು)**

| ಕ್ರ.ಸಂ. | ಕಾರ್ಯ ವಿಭಾಗ | ಮಾರ್ಚ್ 2025ಕ್ಕೆ ಇದ್ದಂತೆ | ಮಾರ್ಚ್ 2026ಕ್ಕೆ ಇದ್ದಂತೆ | ಹೆಚ್ಚಳ (ರೂ.) | ಶೇಕಡಾವಾರು ವೃದ್ಧಿ |
|---|---|---|---|---|---|
| 1 | ಠೇವಣಾತಿಗಳು | ರೂ.589 ಕೋಟಿ | ರೂ.695 ಕೋಟಿ | 106 ಕೋಟಿ | 18% |
| 2 | ಸಾಲ ಮತ್ತು ಮುಂಗಡ | ರೂ.505 ಕೋಟಿ | ರೂ.611 ಕೋಟಿ | 106 ಕೋಟಿ | 21% |
| 3 | ಒಟ್ಟು ವ್ಯವಹಾರ (Deposit+Advance) | ರೂ.1094 ಕೋಟಿ | ರೂ.1306 ಕೋಟಿ | 212 ಕೋಟಿ | 19% |
| 4 | ನಿವ್ವಳ ಲಾಭ | ರೂ.16.29 ಕೋಟಿ | ರೂ.19.47 ಕೋಟಿ | 3.18 ಕೋಟಿ | 19% |
| 5 | ಶೇಕಡಾವಾರು ಅನುತ್ಪಾದಕ ಆಸ್ತಿ | 0.05% | 0.04% | – | – |
| 6 | ನಿವ್ವಳ ಅನುತ್ಪಾದಕ ಆಸ್ತಿ | Nil | Nil | – | – |
| 7 | ಒಟ್ಟು ವಹಿವಾಟು (Turnover) | ರೂ.4583 ಕೋಟಿ | ರೂ.6002 ಕೋಟಿ | 1419 ಕೋಟಿ | 31% |
| 8 | ದುಡಿಯುವ ಬಂಡವಾಳ | ರೂ.661 ಕೋಟಿ | ರೂ.778 ಕೋಟಿ | 117 ಕೋಟಿ | 18% |

2025–26ನೇ ಸಾಲಿನಲ್ಲಿ ಸಂಘವು ಸಾಧಿಸಿರುವ ಪ್ರಗತಿಗೆ ಸಹಕರಿಸಿದ, ಸಂಘದ ಆಡಳಿತ ಮಂಡಳಿಗೆ, ಎಲ್ಲಾ ಠೇವಣಿ ಹಾಗೂ ಸಾಲಗಾರ ಸದಸ್ಯ ಬಾಂಧವರಿಗೆ, ಶಾಖಾ ಸಲಹಾ ಸಮಿತಿ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಸಂಘದ ಎಲ್ಲಾ ಸದಸ್ಯ ಬಾಂಧವರಿಗೆ ವಿಶೇಷ ಧನ್ಯವಾದಗಳು. ತಮ್ಮ ಸೇವಾ ದಕ್ಷತೆ ಮತ್ತು ಪರಿಶ್ರಮದಿಂದ ಸಂಘದ ಈ ಪ್ರಗತಿಗೆ ಕೊಡುಗೆಯನ್ನು ನೀಡಿದ ಸಂಘದ ಸಿಬ್ಬಂದಿಗಳಿಗೆ ವಿಶೇಷ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮುಂದಿನ ವರ್ಷಗಳಲ್ಲಿ ಕೂಡ ತಮ್ಮಿಂದ ಸಹಕಾರವನ್ನು ಬಯಸುತ್ತಾ, ಎಲ್ಲರಿಗೂ ವಿಷು ಹಬ್ಬದ ಶುಭಾಶಯಗಳನ್ನು ಸಲ್ಲಿಸುತ್ತಾ, ಹೊಸ ವಿತ್ತೀಯ ವರ್ಷ 2026–27 ತಮಗೆಲ್ಲರಿಗೂ ಶುಭಕರವಾಗಲೆಂದು ಹಾರೈಸುತ್ತೇನೆ.

(ಕೆ. ಜೈರಾಜ್ ಬಿ. ರೈ)
ಅಧ್ಯಕ್ಷರು

## ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷ ಡಾ. ಎಂ.ಎನ್. ರಾಜೇಂದ್ರ ಕುಮಾರ್‌ರವರಿಗೆ ಹುಟ್ಟುಹಬ್ಬದ ಶುಭಾಶಯಗಳು



ದಿನಾಂಕ 24.02.2026ರಂದು
ತನ್ನ 77ನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡ
ಎಸ್.ಸಿ.ಡಿ.ಸಿ.ಸಿ. ಬ್ಯಾಂಕ್‌ನ ಅಧ್ಯಕ್ಷರಾದ
ಸಹಕಾರ ರತ್ನ ಡಾ. ಎಂ.ಎನ್. ರಾಜೇಂದ್ರ ಕುಮಾರ್‌ರವರನ್ನು
ಸಂಘದ ಅಧ್ಯಕ್ಷರಾದ
ಶ್ರೀ ಕೆ. ಜೈರಾಜ್ ಬಿ. ರೈಯವರು
ಅಭಿನಂದಿಸಿ ಹುಟ್ಟುಹಬ್ಬದ ಶುಭಾಶಯಗಳನ್ನು
ಕೋರಿದ ಸಂದರ್ಭ.

## ಸರ್ ಎಂ. ವಿಶ್ವೇಶ್ವರಯ್ಯ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ. ಶಿವಮೊಗ್ಗ ಇವರಿಂದ ದಿನಾಂಕ 14.03.2026 ರಂದು ಸಂಘಕ್ಕೆ ಅಧ್ಯಯನ ಭೇಟಿ







ಸರ್ ಎಂ. ವಿಶ್ವೇಶ್ವರಯ್ಯ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಶಿವಮೊಗ್ಗ ಇದರ ಆಡಳಿತ ಮಂಡಳಿ ಸದಸ್ಯರು, ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಸಿಬ್ಬಂದಿಗಳು ಸಂಘದ ಕೇಂದ್ರ ಕಛೇರಿಗೆ ದಿನಾಂಕ 14.03.2026ರಂದು ಅಧ್ಯಯನ ಭೇಟಿ ನೀಡಿ ಸಂಘದೊಂದಿಗೆ ವಿಚಾರ ವಿನಿಮಯವನ್ನು ನಡೆಸಿದರು.

ಸರ್ ಎಂ. ವಿಶ್ವೇಶ್ವರಯ್ಯ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ.,ನ ಆಡಳಿತ ಮಂಡಳಿಯು, ಸಂಘವು ಸಾಧಿಸಿದ ಪ್ರಗತಿಯನ್ನು ಅಧ್ಯಕ್ಷರ ನಾಯಕತ್ವವನ್ನು ಶ್ಲಾಘಿಸಿ, ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ಯವರನ್ನು ಶಾಲು ಹೊದಿಸಿ, ಹೂಗುಚ್ಛ ಮತ್ತು ಸ್ಮರಣಿಕೆ ನೀಡಿ ಗೌರವಿಸಿ, ಶುಭ ಹಾರೈಸಿದರು.

# ಗ್ರಾಹಕ ಸಂಪರ್ಕ ಸಭೆ







ದಿನಾಂಕ 17.02.2026ರಂದು ಉಪ್ಪಿನಂಗಡಿ ಶಾಖೆ




ದಿನಾಂಕ 27.02.2026ರಂದು ಬೆಳ್ತಂಗಡಿ ಶಾಖೆ




ದಿನಾಂಕ 27.02.2026ರಂದು ಕಡಬ ಶಾಖೆ

## ಹುಟ್ಟುಹಬ್ಬದ ಶುಭಾಶಯಗಳು

| ಸಿಬ್ಬಂದಿ ಹೆಸರು | ಶಾಖೆ | ಸಿಬ್ಬಂದಿ ಹೆಸರು | ಶಾಖೆ |
|---|---|---|---|
| ಶ್ರೀಮತಿ ನಿರ್ಮಲ ಶೆಟ್ಟಿ | ಹೆಬ್ರಿ | ಶ್ರೀ ಭರತ್ ಎಸ್. | ಶಿರ್ವ |
| ಶ್ರೀಮತಿ ತುಳಸಿ | ಸುರತ್ಕಲ್ | ಶ್ರೀ ಅಖಿಲ್ ರೈ ಬಿ.ಕೆ. | ಚಿಲಿಂಬಿ |
| ಶ್ರೀಮತಿ ಸ್ವಪ್ನ ಬಿ. | ತೊಕ್ಕೊಟ್ಟು | ಶ್ರೀಮತಿ ವಿಧಿಶಾ | ಉಪ್ಪಿನಂಗಡಿ |
| ಶ್ರೀಮತಿ ಅಕ್ಷತ ಕುಮಾರಿ | ಚಿಲಿಂಬಿ | ಶ್ರೀಮತಿ ಅಶ್ವಿನಿ | ಹಿರಿಯಡ್ಕ |
| ಕು. ಶ್ರುತಿ ಕೆ. | ಬಿ.ಸಿ.ರೋಡ್ | ಶ್ರೀ ಸೇಸಪ್ಪ ನ್ಯಾಕ್ | ಸುಳ್ಯ |
| ಶ್ರೀಮತಿ ಲಾವಣ್ಯ | ಉಡುಪಿ ನಗರ | ಶ್ರೀಮತಿ ಉಷಾ ಶೆಟ್ಟಿ | ಕೇಂದ್ರ ಕಛೇರಿ |
| ಶ್ರೀಮತಿ ಅಶ್ವಿತಾ ಎಂ. | ಸುಳ್ಯ | ಶ್ರೀ ರಾಘವೇಂದ್ರ ರಾವ್ | ಉಡುಪಿ ನಗರ |
| ಶ್ರೀ ಬಾಲಕೃಷ್ಣ ರೈ | ಪುತ್ತೂರು | ಶ್ರೀಮತಿ ಶ್ರೀಲತಾ ಶೆಟ್ಟಿ | ಬೈಂದೂರು |
| ಶ್ರೀ ಶ್ರೀಹರ್ಷ ಡಿಎಸ್. | ಬಿ.ಸಿ.ರೋಡ್ | ಶ್ರೀ ಕುಂಞ | ಮೂಡಬಿದ್ರಿ |
| ಶ್ರೀಮತಿ ಜ್ಯೋತಿ | ಕೇಂದ್ರ ಕಛೇರಿ | ಶ್ರೀ ರಮೇಶ್ ಪಿ | ತೊಕ್ಕೊಟ್ಟು |
| ಶ್ರೀಮತಿ ಅನಿತಾ ಎ. | ವೆಲೆನ್ಸಿಯ | ಶ್ರೀಮತಿ ಉಷಾ ಬಿ. | ಉಪ್ಪಿನಂಗಡಿ |
| ಶ್ರೀ ಕರುಣಾಕರ್ ಶೆಟ್ಟಿ | ಸುಳ್ಯ | ಶ್ರೀ ಹರೀಶ್ ಮೂಲ್ಯ | ವಿಟ್ಲ |
| ಶ್ರೀ ಗಣೇಶ್ ಜಿ.ಕೆ. | ಕೇಂದ್ರ ಕಛೇರಿ | ಶ್ರೀ ನವೀನ್ ಕುಮಾರ್ | ಕಾರ್ಕಳ |
| ಶ್ರೀಮತಿ ಜಯಂತಿ ಖಾರ್ವಿ | ಕುಂದಾಪುರ | ಶ್ರೀ ನಾಗರಾಜ್ | ಕುಂದಾಪುರ |
| ಶ್ರೀ ಮೋಹನ್‌ದಾಸ್ ಶೆಟ್ಟಿ | ಚಿಲಿಂಬಿ | ಶ್ರೀ ನಾಗರಾಜ್ ಎಚ್. | ಬೈಂದೂರು |
| ಶ್ರೀಮತಿ ಮಿಸ್ರಿಯ ಪಿ.ಐ. | ಉಪ್ಪಿನಂಗಡಿ | ಶ್ರೀಮತಿ ನಿಶ್ಮಿತಾ | ಮುಲ್ಕಿ |
| ಶ್ರೀ ಶಮಿತ್ ಕುಮಾರ್ | ಹಂಪನಕಟ್ಟೆ | | |

## ಅಭಿನಂದನೆಗಳು



- ಸಂಘದ ಬೆಳ್ತಂಗಡಿ ಶಾಖೆಯ ಸಿಬ್ಬಂದಿ ಚಿ। ಸೌ। ಅಕ್ಷತಾರವರ ವಿವಾಹವು ಚಿ। ಅಜಿತ್‌ರವರೊಂದಿಗೆ ಇತ್ತೀಚೆಗೆ ಜರಗಿತು.
- ಸಂಘದ ಹಂಪನಕಟ್ಟೆ ಶಾಖೆಯ ಸಿಬ್ಬಂದಿ ಚಿ। ಶಮಿತ್ ರವರ ವಿವಾಹವು ಚಿ। ಸೌ। ರಕ್ಷಿತಾ ರವರೊಂದಿಗೆ ಇತ್ತೀಚೆಗೆ ಜರಗಿತು.

**ವೈವಾಹಿಕ ಜೀವನಕ್ಕೆ ಕಾಲಿಟ್ಟ ನವ ವಧೂ–ವರರಿಗೆ ಹೃತ್ಪೂರ್ವಕ ಅಭಿನಂದನೆಗಳು.**

## ಡಿಜಿಟಲ್ ಜಗತ್ತಿನಲ್ಲಿ ಸುರಕ್ಷಿತ ಹೆಜ್ಜೆಗಳು

ಇಂದಿನ ದಿನಗಳಲ್ಲಿ ಡಿಜಿಟಲ್ ಸೇವೆಗಳು ನಮ್ಮ ಜೀವನದ ಭಾಗವಾಗಿದ್ದು ಇಂದು ಬ್ಯಾಂಕಿಂಗ್, ಹಣ ವರ್ಗಾವಣೆ, ಬಿಲ್ ಪಾವತಿ ಮುಂತಾದ ಕೆಲಸಗಳನ್ನು ನಾವು ಮೊಬೈಲ್ ಮತ್ತು ಇಂಟರ್‌ನೆಟ್ ಮೂಲಕ ಸುಲಭವಾಗಿ ಮಾಡುತ್ತಿದ್ದೇವೆ. ಸಹಕಾರ ಸಂಘಗಳ ಸದಸ್ಯರಿಗೂ ಡಿಜಿಟಲ್ ಸೇವೆಗಳು ಹತ್ತಿರವಾಗುತ್ತಿರುವ ಈ ಸಂದರ್ಭದಲ್ಲಿ, ಸೈಬರ್ ಭದ್ರತೆ ಬಗ್ಗೆ ಅರಿವು ಹೊಂದುವುದು ಅತ್ಯಂತ ಅಗತ್ಯವಾಗಿದೆ. ತಂತ್ರಜ್ಞಾನವು ನಮ್ಮ ಜೀವನವನ್ನು ಸುಲಭಗೊಳಿಸುವ ಸಾಧನವೇ ಹೊರತು ಕೇವಲ ಸಂಕೀರ್ಣ ಪ್ರಕ್ರಿಯೆಯಲ್ಲ. ಆದರೆ, ಈ ಸೌಲಭ್ಯಗಳ ಜೊತೆಗೆ ಸೈಬರ್ ವಂಚನೆ ಎಂಬ ಸವಾಲುಗಳೂ ಬೆನ್ನಿಗಿವೆ. ನಾವು ವಹಿಸುವ ಸಣ್ಣ ಜಾಗರೂಕತೆ ನಮ್ಮ ಜೀವನದ ಉಳಿತಾಯವನ್ನು ಕಾಪಾಡಬಲ್ಲದು.

ನಮ್ಮ ಸಹಕಾರ ಸಂಘದಲ್ಲಿ ಡಿಜಿಟಲ್ ಬಳಕೆ ಇನ್ನೂ ಸೀಮಿತವಾಗಿದ್ದರೂ, ಸದಸ್ಯರು ಈ ಬದಲಾವಣೆಯ ಬಗ್ಗೆ ತಿಳಿದುಕೊಳ್ಳುವುದು ಮುಖ್ಯವಾಗಿದೆ. ಡಿಜಿಟಲ್ ಎಂದರೆ ಕೇವಲ ವ್ಯವಹಾರ ಮಾತ್ರವಲ್ಲ, ಮಾಹಿತಿ ಹಂಚಿಕೆ ಮತ್ತು ಸೇವೆಗಳ ಸುಲಭ ಬಳಕೆಯೂ ಆಗಿದೆ.

ಡಿಜಿಟಲ್ ಸೇವೆಗಳೊಂದಿಗೆ ಅಪಾಯಗಳೂ ಹೆಚ್ಚುತ್ತಿರುವುದರಿಂದ, ಆಮಿಷಗಳಿಗೆ ಬಲಿಯಾಗದೆ ಎಚ್ಚರದಿಂದಿರುವುದು ಬಹಳ ಮುಖ್ಯವಾಗಿದೆ. ಸಾಮಾನ್ಯವಾಗಿ ನಮ್ಮ ಮೊಬೈಲ್‌ಗೆ ಅಪರಿಚಿತ ಸಂಖ್ಯೆಯಿಂದ ಕರೆಗಳು, ಸಂದೇಶಗಳು ಅಥವಾ ಲಿಂಕ್‌ಗಳು ಬರುತ್ತಲೇ ಇರುತ್ತವೆ. ನಿಮ್ಮ ಮೊಬೈಲ್‌ಗೆ ಬರುವ ಅಪರಿಚಿತ ಕರೆ ಅಥವಾ ಸಂದೇಶಗಳ ಬಗ್ಗೆ ಸದಾ ಎಚ್ಚರಿಕೆಯಿಂದಿರುವುದು ಅಗತ್ಯವಾಗಿದೆ.

- "ನಿಮ್ಮ ಬ್ಯಾಂಕ್ ಖಾತೆ ಸ್ಥಗಿತಗೊಳ್ಳಲಿದೆ (Block),"
- "ನಿಮಗೆ ಲಾಟರಿ ಅಥವಾ ಬಹುಮಾನ ಬಂದಿದೆ,"
- "ಕೆವೈಸಿ (KYC) ಅಪ್‌ಡೇಟ್ ಮಾಡಲು ಈ ಲಿಂಕ್ ಕ್ಲಿಕ್ ಮಾಡಿ"

ಇಂತಹ ಮಾತುಗಳು ಕೇಳಿದಾಗ ನಮಗೆ ಗಾಬರಿಯಾಗಬಹುದು ಅಥವಾ ಕುತೂಹಲವಾಗಬಹುದು. ಆದರೆ ಇಲ್ಲಿ ಸ್ವಲ್ಪ ಯೋಚನೆ ಮಾಡುವುದು ಬಹಳ ಮುಖ್ಯ. ಪ್ರತಿ ಕರೆ ಅಥವಾ ಸಂದೇಶ ನಿಜವಾಗಿರೋದಿಲ್ಲ. ಕೆಲವೊಮ್ಮೆ ಅವು ಉಪಯುಕ್ತ ಮಾಹಿತಿಯನ್ನು ಕೊಡಬಹುದು, ಆದರೆ ಹಲವಾರು ಬಾರಿ ಅವು ಗೊಂದಲ ಉಂಟುಮಾಡುವ ಅಥವಾ ಮೋಸ ಮಾಡುವ ಪ್ರಯತ್ನವಾಗಿರುತ್ತದೆ. ಆದ್ದರಿಂದ ತಕ್ಷಣ ನಂಬುವ ಬದಲು, "ಇದು ನಿಜವೇ?" ಎಂದು ನಮ್ಮನ್ನು ನಾವು ಕೇಳಿಕೊಳ್ಳುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಯಾವುದೇ ಬ್ಯಾಂಕ್ ಅಥವಾ ಸಹಕಾರ ಸಂಘವು ಫೋನ್ ಮೂಲಕ ವೈಯಕ್ತಿಕ ಮಾಹಿತಿಯನ್ನು ಕೇಳುವುದಿಲ್ಲ. ನಮ್ಮ ವೈಯಕ್ತಿಕ ಮಾಹಿತಿ – OTP, ಪಾಸ್‌ವರ್ಡ್, ಬ್ಯಾಂಕ್ ವಿವರಗಳು – ಇವೆಲ್ಲವೂ ನಮ್ಮ ಹಣದ ಬೀಗದ ಕೀಲಿ ಇದ್ದಂತೆಯೇ. ಇದನ್ನು ಯಾರೊಂದಿಗೂ ಹಂಚಿಕೊಳ್ಳದೇ ಸುರಕ್ಷಿತವಾಗಿ ಇಟ್ಟುಕೊಳ್ಳುವುದು ಅತ್ಯಂತ ಅಗತ್ಯ. ಸರಳವಾಗಿ ಹೇಳುವುದಾದರೆ, ಸ್ವಲ್ಪ ಜಾಗ್ರತೆ ಮತ್ತು ಯೋಚನೆಯೊಂದಿಗೆ ನಡೆದುಕೊಂಡರೆ, ನಾವು ಸುಲಭವಾಗಿ ಡಿಜಿಟಲ್ ಜಗತ್ತಿನಲ್ಲಿ ಸುರಕ್ಷಿತರಾಗಿರಬಹುದು.

ಮಾಹಿತಿ ಸಂಗ್ರಹಣೆ: **ಶ್ರೀ ಶಮಂತ್ ಟಿ. ರೈ**

Private Circulation only

**BOOK POST**

**To**

From,

**Sri Ramakrishna Credit Co-operative Society Ltd.,**
2nd Floor, Amruthothsav Building,
Bunts Hostel Circle, Mangalore – 575 003.